ಮೆ// ಕರ್ನಾಟಕ ಸ್ಟೇಟ್ ಮಿನರಲ್ ಕಾರ್ಪೋರೇಶನ್ ಲಿಮಿಟೆಡ್, ರವರು ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ದುಮಗೆರೆ ಗ್ರಾಮದ ಸರ್ವೆ ಸಂಖ್ಯೆ 5(ಪಿ) ಇಲ್ಲಿ 11.30 ಹೆಕ್ಟೇರ್ ಪ್ರದೇಶದಲ್ಲಿ ಈಗಾಗಲೇ ವರ್ಷವೊಂದಕ್ಕೆ 1500 ಕ್ಯೂಬಿಕ್ ಮೀಟರ್ ಹಸಿರು ಗ್ರಾನೈಟ್ ಕ್ವಾರಿಯನ್ನು ಕಾರ್ಯಾಚರಿಸುತ್ತಿದ್ದು ಕ್ವಾರಿಯ ಸಾಮರ್ಥ್ಯವನ್ನು 1500 ಕ್ಯೂಬಿಕ್ ಮೀಟರ್ ನಿಂದ 4200 ಕ್ಯೂಬಿಕ್ ಮೀಟರ್‌ಗೆ ಹೆಚ್ಚಿಸಲು ಉದ್ದೇಶಿಸಿರುವ ಹಿನ್ನೆಲೆಯಲ್ಲಿ ದಿನಾಂಕ 11-08-2022 ರಂದು ಪೂರ್ವಾಹ್ನ 11.00 ಗಂಟೆಗೆ ಅಪರ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ನಡೆದ ಪರಿಸರ ಸಾರ್ವಜನಿಕ ಆಲಿಕೆ ಸಭೆಯ ನಡಾವಳಿಗಳು.

| | | |
|---|---|---|
| ಪರಿಸರ ಕುರಿತಾದ ಸಾರ್ವಜನಿಕ ಆಲಿಕೆ ಸಭೆಯ ಸ್ಥಳ | | ಮೆ// ಕರ್ನಾಟಕ ಸ್ಟೇಟ್ ಮಿನರಲ್ ಕಾರ್ಪೋರೇಶನ್ ಲಿಮಿಟೆಡ್, ಹಸಿರು ಗ್ರಾನೈಟ್ ಕ್ವಾರಿ, ಸರ್ವೆ ಸಂಖ್ಯೆ 5(ಪಿ), ದುಮಗೆರೆ ಗ್ರಾಮ, ಹಾಸನ ತಾಲ್ಲೂಕು, ಹಾಸನ ಜಿಲ್ಲೆ. |
| ಹಾಜರಿದ್ದ ಪರಿಸರ ಸಾರ್ವಜನಿಕ ಆಲಿಕೆ ಸಮಿತಿಯ ಸದಸ್ಯರುಗಳ ವಿವರ | | ಪದನಾಮ |
| 1. | ಶ್ರೀಮತಿ. ಕವಿತ ರಾಜಾರಾಂ, ಅಪರ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ | ಅಧ್ಯಕ್ಷರು |
| 2 | ಡಾ// ಬಿ.ಎಂ. ಪ್ರಕಾಶ್, ಹಿರಿಯ ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ. ಪಲಯ ಕಛೇರಿ, ಮೈಸೂರು. | ಸದಸ್ಯರು |
| 3. | ಶ್ರೀಮತಿ. ವೈಎಸ್.ರಾಧಾ, ಪರಿಸರ ಅಧಿಕಾರಿ, ಪ್ರಾದೇಶಿಕ ಕಛೇರಿ, ಹಾಸನ. | ಸದಸ್ಯ ಸಮಾವೇಶಕರು |
| 1. | ಶ್ರೀ.ರವಿಚಂದ್ರ ಕೆ, ಉಪ ಪರಿಸರ ಅಧಿಕಾರಿ, ಕ.ರಾ.ಮಾ.ನಿ.ಮಂ. ಪ್ರಾದೇಶಿಕ ಕಛೇರಿ, ಹಾಸನ | |
| ಮೆ// ಕರ್ನಾಟಕ ಸ್ಟೇಟ್ ಮಿನರಲ್ ಕಾರ್ಪೋರೇಶನ್ ಲಿಮಿಟೆಡ್ ಇವರ ಉದ್ದೇಶಿತ ಯೋಜನೆಯ ಪತಿಯಿಂದ ಹಾಜರಿದ್ದ ಪ್ರತಿನಿಧಿಗಳು | | |
| 1. | ಶ್ರೀ. ರಮೇಶಪ್ಪ, ವ್ಯವಸ್ಥಾಪಕರು, ಎಲ್ & ಇ, ಕರ್ನಾಟಕ ಸ್ಟೇಟ್ ಮಿನರಲ್ ಕಾರ್ಪೋರೇಶನ್ ಲಿಮಿಟೆಡ್. | |
| 2. | ಶ್ರೀಮತಿ. ಬಿನುತಾ ರಂಗನಾಥ್, ವ್ಯವಸ್ಥಾಪಕರು(ಪರಿಸರ, ಕರ್ನಾಟಕ ಸ್ಟೇಟ್ ಮಿನರಲ್ ಕಾರ್ಪೋರೇಶನ್ ಲಿಮಿಟೆಡ್ | |
| 3. | ಶ್ರೀ. ಪರಮೇಶ್ವರ್ ಬಿ ಬಣಕಾರ್, ವ್ಯವಸ್ಥಾಪಕರು(ಉತ್ಪಾದನೆ), ಕರ್ನಾಟಕ ಸ್ಟೇಟ್ ಮಿನರಲ್ ಕಾರ್ಪೋರೇಶನ್ ಲಿಮಿಟೆಡ್ | |
| 2. | ಶ್ರೀ. ಜವರೇಗೌಡ, ಮೆ// ಎ.ಬಿ.ಸಿ ಟೆಕ್ನೋ ಲ್ಯಾಬ್ಸ್, ಚೆನ್ನೈ. | |
| ಹಾಜರಿದ್ದ ಅಧಿಕಾರಿಗಳು/ಯೋಜನಾದಾರರು/ಸಾರ್ವಜನಿಕರುಗಳ ವಿವರವನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ | | |

ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಇವರು ಪರಿಸರ (ಸಂರಕ್ಷಣೆ) ಕಾಯ್ದೆ 1986 ರಡಿಯಲ್ಲಿ ದಿನಾಂಕ:14.09.2006 ರಲ್ಲಿ ಜಾರಿಗೊಳಿಸಿರುವ ಪರಿಸರ ಅಘಾತ ಅಧ್ಯಯನದ ಅಧಿಸೂಚನೆ (ತಿದ್ದುಪಡಿ ದಿನಾಂಕ:01.12.2009) ರನ್ವಯ ಯೋಜನಾ ಪ್ರವರ್ತಕರು ಸದರಿ ಯೋಜನೆಗೆ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ.

ಸದರಿ ಉದ್ದೇಶಿತ ಯೋಜನೆಯು ಮೇಲೆ ತಿಳಿಸಿದ ಅಧಿಸೂಚನೆಯನ್ವಯ ಉತ್ಪಾದನಾ ಸಾಮರ್ಥ್ಯ ವರ್ಷವೊಂದಕ್ಕೆ 1500 ಕ್ಯೂಬಿಕ್ ಮೀಟರ್ ನಿಂದ 4200 ಕ್ಯೂಬಿಕ್ ಮೀಟರ್ ಮಾಡುವುದರಿಂದ ಪ್ರವರ್ಗ-ಬಿ1 (Category-B1) ರಡಿಯಲ್ಲಿ ಯೋಜನೆಯು ಬರುತ್ತದೆ. ಆದ್ದರಿಂದ, ರಾಜ್ಯ ಸರ್ಕಾರದ ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಇಲ್ಲಿಂದ ಪರಿಸರ ವಿಮೋಚನಾ ಪತ್ರ ಪಡೆಯಬೇಕಾಗಿರುತ್ತದೆ.

ಆ ಮೇರೆಗೆ ಯೋಜನಾ ಪ್ರವರ್ತಕರು ಪರಿಸರ ವಿಮೋಚನಾ ಪತ್ರವನ್ನು ಪಡೆಯಲು ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ ಇಲ್ಲಿಗೆ ಈಗಾಗಲೇ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಸದರಿಯವರು ಸಲ್ಲಿಸಿರುವ ಅರ್ಜಿಯನ್ನು ಪರಿಶೀಲಿಸಿ ದಿನಾಂಕ 27-08-2021 ರಂದು ಷರತ್ತುಬದ್ಧ ನಿಬಂಧನೆ (Terms of

Reference) ಗಳನ್ನು ನೀಡಿರುತ್ತಾರೆ. ಈ ಷರತ್ತುಬದ್ಧ ನಿಬಂಧನೆಗಳ ಅನ್ವಯ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸುವುದು ಕಡ್ಡಾಯವಾಗಿರುತ್ತದೆ.

ಯೋಜನಾ ಪ್ರವರ್ತಕರು ಷರತ್ತುಬದ್ಧ ನಿಬಂಧನೆಗಳನ್ನು ಪಾಲಿಸುವ ಸಲುವಾಗಿ ಮೆ//ಎ.ಬಿ.ಸಿ. ಟೆಕ್ನೋ ಲ್ಯಾಬ್ಸ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಚೆನ್ನೈ ಇವರು ತಯಾರಿಸಿದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನ ವರದಿ ಮತ್ತು ಕಾರ್ಯಕಾರಿ ಸಾರಾಂಶವನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಸಿದ್ಧಪಡಿಸಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಿಕೊಡಲು ಸದಸ್ಯ ಕಾರ್ಯದರ್ಶಿಗಳು, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇವರಿಗೆ ದಿನಾಂಕ 05.04.2022 ರಂದು ಮನವಿ ಸಲ್ಲಿಸಿರುತ್ತಾರೆ.

ಯೋಜನಾ ಪ್ರವರ್ತಕರ ಸದರಿ ಮನವಿಯ ಮೇರೆಗೆ, ಕೇಂದ್ರ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಜಿಲ್ಲಾಧಿಕಾರಿಗಳು, ಹಾಸನ ಇವರಿಗೆ ಪರಿಸರ ಸಾರ್ವಜನಿಕ ಆಲಿಕಾ ಸಭೆ ನಡೆಸಲು ಸೂಕ್ತ ದಿನಾಂಕ ಹಾಗೂ ಸಮಯವನ್ನು ನೀಡಲು ದಿನಾಂಕ 23.05.2022ರ ಪತ್ರದ ಮೂಲಕ ಕೋರಲಾಗಿರುತ್ತದೆ. ಆ ಮೇರೆಗೆ ಜಿಲ್ಲಾಧಿಕಾರಿಗಳು ದಿನಾಂಕ: 11.08.2022 ರಂದು ಪೂರ್ವಾಹ್ನ 11.00 ಗಂಟೆಗೆ ಯೋಜನಾ ಸ್ಥಳದಲ್ಲಿ ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಸಮ್ಮತಿ ಸೂಚಿಸಿರುತ್ತಾರೆ. ಈ ಸಭೆಗೆ ಪೂರಕವಾಗಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ರಾಜ್ಯ ಮಟ್ಟದ ಪ್ರಮುಖ ದಿನ ಪತ್ರಿಕೆಗಳಾದ ವಿಜಯ ವಾಣಿ (ಕನ್ನಡ) ಹಾಗೂ ಸಂಡೇ ಎಕ್ಸ್ ಪ್ರೆಸ್ (ಆಂಗ್ಲ) ಗಳಲ್ಲಿ ದಿನಾಂಕ 10-07-2022 ರಂದು ಪತ್ರಿಕಾ ಪ್ರಕಟಣೆ ನೀಡಿ ಈ ಯೋಜನೆಗೆ ಸಂಬಂಧಿಸಿದಂತೆ ಸಾರ್ವಜನಿಕರ ಅನಿಸಿಕೆ/ಆಕ್ಷೇಪಣೆ/ಸೂಚನೆ/ ಸಲಹೆ/ಅಭಿಪ್ರಾಯಗಳನ್ನು ಲಿಖಿತವಾಗಿ 30 ದಿನಗಳ ಒಳಗೆ ಸಲ್ಲಿಸಲು ಕೋರಲಾಗಿರುತ್ತದ. ಮುಂದುವರೆದು, ಹಾಸನ ಜಿಲ್ಲೆಯ ಪ್ರಮುಖ ಸ್ಥಳೀಯ ದಿನಪತ್ರಿಕೆಗಳಾದ "ಜೇನು ಗಿರಿ", "ಸತ್ಯದ ಹೊನಲು", "ಜನಹಿತ", "ಹಾಸನ ಜಿಲ್ಲಾ ದರ್ಪಣ", "ಎಚ್ಚರ ವಾಣಿ" ದಲ್ಲಿ ದಿನಾಂಕ:09.08.2022 ಮತ್ತು "ಸಂಯುಕ್ತ ಕರ್ನಾಟಕ" ದಲ್ಲಿ 10.08.2022, ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆ ಕುರಿತಾದ ಪ್ರಕಟಣೆಯನ್ನು ನೀಡಲಾಗಿರುತ್ತದೆ.

ಸದರಿ ಯೋಜನೆಗೆ ಸಂಬಂಧಿಸಿದಂತೆ ಯೋಜನಾ ಪ್ರವರ್ತಕರು ಸಲ್ಲಿಸಿದ್ದ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನದ ವರದಿ ಮತ್ತು ಕಾರ್ಯಕಾರಿ ಸಾರಂಶದ ಕನ್ನಡ ಮತ್ತು ಆಂಗ್ಲ ಭಾಷೆಯ ಪ್ರತಿಗಳನ್ನು ಈ ಕೆಳಕಂಡ ಸ್ಥಳಗಳಲ್ಲಿ ಸಾರ್ವಜನಿಕರ ಪರಾಮರ್ಶೆಗೆ ಇಡಲಾಗಿತ್ತು.

- ಜಿಲ್ಲಾಧಿಕಾರಿಗಳ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ,
- ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಾರ್ಯಾಲಯ, ಜಿಲ್ಲಾ ಪಂಚಾಯತ್, ಹಾಸನ ಜಿಲ್ಲೆ, ಹಾಸನ,
- ಜಿಲ್ಲಾ ಕೈಗಾರಿಕಾ ಕೇಂದ್ರ, ಹಾಸನ,
- ಗ್ರಾಮ ಪಂಚಾಯತಿ ಕಾರ್ಯಾಲಯ, ದುಮಗೆರೆ, ಹಾಸನ ತಾಲ್ಲೂಕು, ಹಾಸನ ಜಿಲ್ಲೆ.
- ತಾಲ್ಲೂಕು ಪಂಚಾಯತ್, ಹಾಸನ, ಹಾಸನ ಜಿಲ್ಲೆ.
- ತಹಸೀಲ್ದಾರರ ಕಾರ್ಯಾಲಯ, ಹಾಸನ, ಹಾಸನ ಜಿಲ್ಲೆ.
- ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ,ಹಾಸನ ಜಿಲ್ಲೆ, ಹಾಸನ.
- ಅರಣ್ಯ ಮತ್ತು ಪರಿಸರ ಮಂತ್ರಾಲಯ, ದಕ್ಷಿಣ ವಲಯ, ಕೋರಮಂಗಲ, ಬೆಂಗಳೂರು.
- ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪರಿಸರ ಭವನ, ಚರ್ಚ್ ಸ್ಟ್ರೀಟ್, ಬೆಂಗಳೂರು

ಯೋಜನಾ ಪ್ರದೇಶದ ಸುತ್ತಮುತ್ತಲಿನ ಸಾರ್ವಜನಿಕರಿಗೆ ಉದ್ದೇಶಿತ ಉದ್ದಿಮೆಯ ಸ್ಥಾಪನೆ ಕುರಿತು ಹಾಗು ಸಾರ್ವಜನಿಕ ಆಲಿಕಾ ಸಭೆ ನಡೆಯುವ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಕರ ಪತ್ರಗಳನ್ನು ದಿನಾಂಕ:10.08.2022 ರಂದು ಹಂಚಲಾಗಿರುತ್ತದೆ.

ಈ ಮೇಲೆ ತಿಳಿಸಿದ ಕಛೇರಿಗಳಲ್ಲಿ ಉದ್ದೇಶಿತ ಯೋಜನೆಗೆ ಸಂಬಂಧಿಸಿದಂತೆ ಯಾವುದೇ ಲಿಖಿತ ಪತ್ರಗಳು ಸ್ವೀಕೃತವಾಗಿರುವುದಿಲ್ಲ.

ದಿನಾಂಕ :11.08.2022ರಂದು ಪೂರ್ವಾಹ್ನ 11.00ಗಂಟೆಗೆ ಶ್ರೀಮತಿ ಕವಿತಾ ರಾಜಾರಾಂ, ಅಪರ ಜಿಲ್ಲಾಧಿಕಾರಿಗಳು ಹಾಸನ ಜಿಲ್ಲೆ ಇವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಲಾಯಿತು.

ಸದಸ್ಯ ಸಮಾವೇಷಕರು ಹಾಗೂ ಪರಿಸರ ಅಧಿಕಾರಿಗಳಾದ ಶ್ರೀಮತಿ. ರಾಧಾ ರವರು ಸಭೆಯಲ್ಲಿ ಹಾಜರಿದ್ದ ಎಲ್ಲರನ್ನು ಸ್ವಾಗತಿಸಿ, ಸಭಾ ಅಧ್ಯಕ್ಷರಾದ ಅಪರ ಜಿಲ್ಲಾಧಿಕಾರಿಗಳನ್ನು ಸಭೆ ನಡೆಸಿಕೊಡುವಂತೆ ಕೋರಿದರು.

ಮುಂದುವರೆದು, ಸದರಿ ಯೋಜನೆಯ ಬಗ್ಗೆ ಪರಿಸರ ಸಾರ್ವಜನಿಕ ಆಲಿಕಾ ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರಿಗೆ ಯೋಜನೆ ಕುರಿತು ವಿವರಣೆ ನೀಡುವಂತೆ ಯೋಜನಾ ಪ್ರವರ್ತಕರಿಗೆ ಪರಿಸರ ಅಧಿಕಾರಿಯವರು ಕೋರಿದರು.

ಅದರಂತೆ, ಮೆ// ಎ.ಬಿ.ಸಿ ಟೆಕ್ನೋ ಲ್ಯಾಬ್ಸ್, ಚೆನ್ನೈ ಇವರು ಉದ್ದೇಶಿತ ಯೋಜನೆಗೆ ಸಂಬಂಧಿಸಿದಂತೆ ಸಿದ್ಧಪಡಿಸಿರುವ ಕ್ಷಿಪ್ರ ಪರಿಸರ ಆಘಾತ ಅಂದಾಜು ಅಧ್ಯಯನ ವರದಿಯ ಕಾರ್ಯಕಾರಿ ಸಾರಾಂಶಗಳಾದ ಯೋಜನೆ ಪ್ರಸ್ತಾವನೆ, ಸರ್ಕಾರದ ಮಂಜೂರಾತಿಗಳು, ಸ್ಥಳೀಯ ನಕ್ಷೆ, ಅಧ್ಯಯನ ಕ್ಷೇತ್ರದ ನಕ್ಷೆಗಳು, ಭೂ ಬಳಕೆಯ ವಿವರಗಳು, ಸ್ಥಳದ ಪ್ರಮುಖ ಲಕ್ಷಣಗಳು, ಮೂಲಭೂತ ಬೇಡಿಕೆಗಳು ಮತ್ತು ಸೌಕರ್ಯಗಳು, ಮಳೆ ನೀರು ನಿರ್ವಹಣೆ, ಪರಿಸರದ ಅಂಶಗಳಾದ ವಾಯು, ಜಲ, ಶಬ್ದ, ಭೂ ಪರಿಸರ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿ, ಪರಿಸರ ನಿರ್ವಹಣ ಯೋಜನೆ, ಪರಿಸರ ಸಂರಕ್ಷಣಾ ಕಾರ್ಯಗಳ ಆಯವ್ಯಯ ಒಟ್ಟು ಪರಿಸರ ನಿರ್ವಹಣಾ ಯೋಜನೆಗಳನ್ನೊಳಗೊಂಡ ವಿವರಗಳನ್ನು ಪವರ್ ಪಾಯಿಂಟ್ ಮೂಲಕ ಸಭೆಗೆ ಮಂಡಿಸಿದರು. ಮಂಡನೆಯಲ್ಲಿ ಪ್ರಸ್ಥಾಪಿಸಿರುವ ಪ್ರಮುಖ ಅಂಶಗಳು ಈ ಕೆಳಕಂಡಂತಿರುತ್ತವೆ.

1. ಪ್ರಸ್ತಾವಿತ ಗಣಿಗಾರಿಕಾ ಪ್ರದೇಶವು ಒಟ್ಟು 11.30 ಹೆಕ್ಟೇರ್(27.37 ಎಕರೆ) ವಿಸ್ತೀರ್ಣ ಹೊಂದಿದ್ದು ಅದರಲ್ಲಿ 5–18 ಹೆಕ್ಟೇರ್ ಅನ್ನು ಗಣಿಗಾರಿಕೆಗೆ, ರಸ್ತೆಗಾಗಿ 0–6 ಹೆಕ್ಟೇರ್, ತ್ಯಾಜ್ಯ ಸಂಗ್ರಹಣೆಗೆ 2–2 ಹೆಕ್ಟೇರ್, ಬ್ಲಾರ್ ಸಂಗ್ರಹದ ಜಾಗಕ್ಕೆ 0–07 ಹೆಕ್ಟೇರ್, ಬಫರ್ ವಲಯಕ್ಕೆ–2.13 ಹೆಕ್ಟೇರ್, ಖಾಲಿ ಪ್ರದೇಶ–3.79 ಹೆಕ್ಟೇರ್ ಮತ್ತು 2.1 ಹೆಕ್ಟೇರ್ ಹಸಿರು ಪಟ್ಟಿಗೆ ಮೀಸಲಿಡಲಾಗಿದೆ.
2. ಅ. ಪ್ರಸ್ತಾವಿತ ಗಣಿಗಾರಿಕೆಯು ಎಸ್.ಹೆಚ್.102 (ಹುಳಿಯಾರು–ಜಕ್ಕನಹಳ್ಳಿ ರಸ್ತೆ–1.0ಕಿಮೀ) ಅಂತರದಲ್ಲಿರುತ್ತದೆ.
   ಬಿ. ಪ್ರಸ್ತಾವಿತ ಗಣಿಗಾರಿಕೆಯು ಎಸ್.ಹೆಚ್.57 (ಬಾಗಲಕೋಟೆ–ಬಿಳಿಗಿರಿ ರಂಗನ ರಸ್ತೆ–4.6 ಕಿ.ಮೀ) ಅಂತರದಲ್ಲಿರುತ್ತದೆ.
   ಇ. ಪ್ರಸ್ತಾವಿತ ಗಣಿಗಾರಿಕೆಯು ಎನ್.ಹೆಚ್.48 (ಮಂಗಳೂರು–ಬೆಂಗಳೂರು ರಸ್ತೆ–7.3 ಕಿಮೀ) ಅಂತರದಲ್ಲಿರುತ್ತದೆ.
3. ರೈಲು ನಿಲ್ದಾಣಗಳು:
   ಅ. ಮಾವಿನಕೆರೆ ರೈಲು ನಿಲ್ದಾಣ–8.6 ಕಿ.ಮೀ.

ಆ. ಶಾಂತಿಗ್ರಾಮ ರೈಲು ನಿಲ್ದಾಣ–7.0 ಕಿ.ಮೀ.

4. ಅರಣ್ಯ ಪ್ರದೇಶಗಳು:

ಅ. ಹೊಂಗರೆ ಆರ್.ಎಫ್–3.6 ಕಿ.ಮೀ.

ಆ. ಗಂಡೆಕಟ್ಟೆ ಆರ್.ಎಫ್–10.0 ಕಿ.ಮೀ.

ಸಿ. ಕಟ್ಟಾಯ ಆರ್.ಎಫ್–11.3 ಕಿ.ಮೀ.

5. ಅ. ತೆರಣ್ಯ ಕೆರೆ–4.7 ಕಿ.ಮೀ.

ಆ. ದೇವಿಹಳ್ಳಿ ಕೆರೆ–5.6 ಕಿ.ಮೀ.

ಸಿ. ಶಾಂತಿಗ್ರಾಮ ಕೆರೆ–7.3 ಕಿ.ಮೀ.

6. ಸದರಿ ಯೋಜನೆಗೆ ನೀರಿನ ಮೂಲವು ಪ್ರಸ್ತುತ ಬೋರ್ ವೆಲ್ ಇದ್ದು, ಅದನ್ನು ನೀರಿಗಾಗಿ ಬಳಸುವರು. ಇದರಲ್ಲಿ ಮುಖ್ಯವಾಗಿ ಗೃಹಬಳಕೆ–2 ಕೆ.ಎಲ್.ಡಿ, 1.5 ಕೆ.ಎಲ್.ಡಿ. ಧೂಳಿನ ನಿಯಂತ್ರಣ ಮತ್ತು ಉಳಿದ 1.5 ಕೆ.ಎಲ್.ಡಿ. ಗಿಡಮರಗಳಿಗೆ ನೀರುಣಿಸುವುದಕ್ಕಾಗಿ ಉಪಯೋಗಿಸಲು ಉದ್ದೇಶಿಸಲಾಗಿದೆ.

7. ಯೋಜನೆಯ ಸುತ್ತಮುತ್ತಲಿನ ಹಳ್ಳಿಗಳ ಅಭಿವೃದ್ಧಿ ದೃಷ್ಟಿಯಿಂದ ಮುಂಬರುವ ವರ್ಷಗಳಲ್ಲಿ ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ (Corporate Social Responsibilities) ಕ್ಷೇತ್ರದಲ್ಲಿ ವಿವಿಧ ಉಪಕ್ರಮಗಳಿಗಾಗಿ ರೂ. 11.5 ಲಕ್ಷಗಳನ್ನು ಸಾರ್ವಜನಿಕರ ಕೌಶಲ್ಯ ಅಭಿವೃದ್ಧಿ, ಆರೋಗ್ಯ ಮತ್ತು ನೈರ್ಮಲ್ಯ, ಶಿಕ್ಷಣ ಮತ್ತು ಜಲ ನಿರ್ವಹಣೆಗಾಗಿ ಮೀಸಲಿಟ್ಟಿರುವುದಾಗಿ ತಿಳಿಸಿದರು.

8. ಪರಿಸರ ನಿರ್ವಹಣಾ ವ್ಯವಸ್ಥೆಗಾಗಿ ಯೋಜನೆಯನ್ನು ರೂಪಿಸಿದ್ದು ಪ್ರತಿ ವರ್ಷ ರೂ.1.4 ಲಕ್ಷಗಳನ್ನು ಪರಿಸರ ನಿರ್ವಹಣೆ ಕಾರ್ಯಗಳಿಗೆ ಬಳಸುವುದಾಗಿ ತಿಳಿಸಿದರು.

ನಂತರ ಪರಿಸರ ಅಧಿಕಾರಿಗಳು ಈ ಉದ್ದೇಶಿತ ಯೋಜನೆಯ ಬಗ್ಗೆ ನೆರೆದಿದ್ದ ಸಾರ್ವಜನಿಕರಿಗೆ ಯಾವುದೇ ಆಕ್ಷೇಪಣೆ/ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳು ಯಾವುದಾದರೂ ಇದ್ದಲ್ಲಿ ಸಭೆಗೆ ಮಂಡಿಸುವಂತೆ ಕೋರಿದರು.

ಅದರಂತೆ ಸಾರ್ವಜನಿಕರು ಯೋಜನೆಯ ಬಗ್ಗೆ ತಮ್ಮ ಕಳಕಳಿ/ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳನ್ನು ಈ ಕೆಳಕಂಡಂತೆ ಮಂಡಿಸಿದರು.

1. **ಶ್ರೀ. ನಾರಾಯಣ, ದುಮಗೆರೆ ಗ್ರಾಮ, ಹಾಸನ ತಾಲ್ಲೂಕು, ಹಾಸನ ಜಿಲ್ಲೆ:**
ದುಮಗೆರೆಯಲ್ಲಿ ಜನರು ವಾಸಿಸುತ್ತಿದ್ದು ವ್ಯವಸಾಯ ಮಾಡುತ್ತಿದ್ದಾರೆ. ಹತ್ತಿರದಲ್ಲೇ ಕೋರೆ ಇದ್ದು ಸಿಡಿಮದ್ದಿನಿಂದ ರೈತರಿಗೆ ತೊಂದರೆಯಾಗುತ್ತಿದೆ. ಬೋರ್‌ವೆಲ್ ನೀರು ಸಿಡಿಮದ್ದಿನ ರಾಸಾಯನಿಕಗಳಿಂದ ಕಲುಷಿತವಾಗಿದೆ. ಸದರಿ ಗಣಿಗಾರಿಕೆಯ ತ್ಯಾಜ್ಯ ಮಣ್ಣು ಮತ್ತು ತ್ಯಾಜ್ಯ ಕಲ್ಲುಗಳನ್ನು ಎಲ್ಲೆಂದರಲ್ಲಿ ದಾಸ್ತಾನು ಮಾಡಲಾಗಿದ್ದು ಇವುಗಳಿಂದ ಪೊದೆಗಳು ಹೆಚ್ಚಾಗಿ ವನ್ಯ ಪ್ರಾಣಿಗಳ ಆವಾಸ ಸ್ಥಾನವಾಗಿದೆ. ಇದರಿಂದ ಸಾರ್ವಜನಿಕರ ಓಡಾಟಕ್ಕೆ ಅನಾನುಕೂಲವಾಗಿದೆ. ಸದರಿಯವರು ಲಿಖಿತವಾಗಿ ನನ್ನ ಸಲಹೆ/ಅಭಿಪ್ರಾಯವನ್ನು ಸಲ್ಲಿಸುತ್ತಿದ್ದೇನೆಂದು ಮಾನ್ಯ ಅಧ್ಯಕ್ಷರಿಗೆ ಸಲ್ಲಿಸಿದರು.

2. ಶ್ರೀ.ರಂಗಸ್ವಾಮಿ ಬಿನ್ **ಜವರೇಗೌಡ, ದುಮಗೆರೆ ಗ್ರಾಮ, ಹಾಸನ ತಾಲ್ಲೂಕು, ಹಾಸನ ಜಿಲ್ಲೆ:**

ಗಣಿಗಾರಿಕೆ ನಡೆಸುವ ಸ್ಥಳಕ್ಕೆ ಹೊಂದಿಕೊಂಡಂತೆ ಇರುವ ಸರ್ವೆ ಸಂಖ್ಯೆ:2/2 ರಲ್ಲಿ 37 ಗುಂಟೆ ಮತ್ತು 8/4 ರಲ್ಲಿ 1 ಎಕರ ಜಮೀನು ನನ್ನದಾಗಿದ್ದು ಗಣಿಗಾರಿಕೆಯಿಂದ ಬೆಳೆ ನಾಶವಾಗಿ ನಷ್ಟವಾಗುತ್ತಿದೆ. ಗಣಿಗಾರಿಕೆಯಿಂದ ಶಬ್ದ ಮಾಲಿನ್ಯ ಹಾಗು ಕೊಳವೆ ಬಾವಿಗೆ ಹಾನಿಯಾಗಿದೆ ಎಂದು ತಿಳಿಸಿದರು.

ಮುಂದುವರೆದು, 2019ನೇ ಸಾಲಿನಲ್ಲಿ ನಾನು ಈಗಾಗಲೇ ಗಣಿಗಾರಿಕೆ ಕಂಪನಿಯವರ ವ್ಯವಸ್ಥಾಪಕ ನಿರ್ದೇಶಕರನ್ನು ಭೇಟಿ ಮಾಡಿ ಪರಿಹಾರ ನೀಡುವಂತೆ ಹಾಗು ಗಣಿಗಾರಿಕೆಯನ್ನು ಸ್ಥಗಿತಗೊಳಿಸಬೇಕೆಂದು ಮನವಿ ನೀಡಿರುವ ಎಂದು ಸಭೆಗೆ ತಿಳಿಸಿದರು. ಆದರೆ ಇದುವರೆಗೆ ದುಮಗೆರೆ ಗ್ರಾಮದವರಿಗೆ ಸಿ.ಎಸ್.ಆರ್ ನಲ್ಲಿ ಪರಿಹಾರವನ್ನು ನೀಡಿರುವುದಿಲ್ಲ. ಬದಲಾಗಿ ಹಾಸನ ಶಾಂತಿಗ್ರಾಮಗಳಿಗೆ ಸಿ.ಎಸ್.ಆರ್ ಹಣವನ್ನು ಉಪಯೋಗಿಸುತಿದ್ದು ಇನ್ನು ಮುಂದೆ ದುಮಗೆರೆ ಗ್ರಾಮಕ್ಕೆ ಈ ಹಣವ್ನು ಮೀಸಲಿಡಬೇಕೆಂದು ತಿಳಿಸಿದರು. ಇದಲ್ಲದೆ, ಗ್ರಾಮದ 15 ರಿಂದ 20 ಮಂದಿಗೆ ರೂ.20,000/- ಹಣವನ್ನು ಪರಿಹಾರವಾಗಿ ನೀಡಿರುತ್ತಾರೆ. ದುಮಗೆರೆ ಗ್ರಾಮದಲ್ಲಿ ಇನ್ನೂ 70 ಕುಟುಂಬಗಳಿದ್ದು ಅವರುಗಳಿಗೆ ಯಾವುದೇ ಪರಿಹಾರವನ್ನು ನೀಡಿರುವುದಿಲ್ಲ.

**ಯೋಜನಾ ವರದಿಯಲ್ಲಿ ಕೆರೆಗಳ ಮಾಹಿತಿಯನ್ನು ತಿಳಿಸಿದ್ದು ದುಮಗೆರೆ ಗ್ರಾಮದ ಕೆರೆಯನ್ನು ಪ್ರಸ್ತಾಪಿಸಿರುವುದಿಲ್ಲ. ದೂರದ ಕೆರೆಗಳ ವಿವರಗಳು ಯೋಜನಾ ವರದಿಯಲ್ಲಿರುತ್ತವೆ. ಈ ಬಗ್ಗೆ ತಾವು ಗಮನ ಹರಿಸಬೇಕೆಂದು ಮನವಿ ಪತ್ರವನ್ನು ಮಾನ್ಯ ಅಧ್ಯಕ್ಷರಿಗೆ ಸಲ್ಲಿಸಿದರು.**

3. **ಶ್ರೀ.ಗಣೇಶ, ನಿವೃತ್ತ ಮಾಸ್ಟರ್, ದುಮಗೆರೆ ಗ್ರಾಮ, ಹಾಸನ ತಾಲ್ಲೂಕು, ಹಾಸನ ಜಿಲ್ಲೆ:**

ಸದರಿ ಗಣಿಗಾರಿಕೆಯಿಂದ ದುಮಗೆರೆ ಗ್ರಾಮಸ್ಥರಿಗೆ ಯಾವುದೇ ಸೌಲಭ್ಯ ದೊರೆತಿರುವುದಿಲ್ಲ. ಗಣಿಗಾರಿಕೆಯಿಂದ ಶಬ್ದ ಮಾಲಿನ್ಯ ಮತ್ತು ವಾಯು ಮಾಲಿನ್ಯವಾಗುತ್ತಿದೆ. ದುಮಗೆರೆ ಗ್ರಾಮವನ್ನು ದತ್ತು ತೆಗೆದುಕೊಂಡು ಗ್ರಾಮಾಭಿವೃದ್ಧಿ ಕ್ರಮಗಳನ್ನು ಕೈಗೊಳ್ಳಿ ಎಂದು ತಿಳಿಸಿದರು.

4. **ಶ್ರೀ. ಡಿ.ಆರ್. ಪ್ರಸನ್ನ ಕುಮಾರ್, ದುಮಗೆರೆ ಗ್ರಾಮ, ಹಾಸನ ತಾಲ್ಲೂಕು, ಹಾಸನ ಜಿಲ್ಲೆ:**

ಗಣಿಗಾರಿಕೆ ಚಟುವಟಿಕೆಯು ಗ್ರಾಮದಿಂದ ಎಷ್ಟು ಅಂತರದಲ್ಲಿರಬೇಕು ಪ್ರಸ್ತುತ ಗಣಿಗಾರಿಕೆಯು 20-30 ಮೀಟರ್ ಅಂತರದಲ್ಲಿದ್ದು ಕಾರ್ಯಾಚರಿಸುತ್ತಿದೆ. ಗಣಿಗಾರಿಕೆ ಮಾಡುವುದರಿಂದ ಶಬ್ದ ಮತ್ತು ವಾಯು ಮಾಲಿನ್ಯ ಉಂಟಾಗಿ ಕೃಷಿ ನಾಶವಾಗುತ್ತದೆ. ಹತ್ತಿರದಲ್ಲೇ ಕೊಳವೆ ಬಾವಿ ಇರುವುದರಿಂದ ಕೊಳವೆ ಬಾವಿಯ ನೀರಿನ ಮಟ್ಟ ಏರುಪೇರಾಗುತ್ತದೆ. ಹತ್ತಿರದ ನೀರಿನ ಕೆರೆಗಳ ಬಗ್ಗೆ ವರದಿಯಲ್ಲಿ ತಿಳಿಸಿರುವುದಿಲ್ಲ. ಗ್ರಾಮದಲ್ಲಿ 75-80 ಕುಟುಂಬಗಳಿದ್ದು ಈ ಗ್ರಾಮದ ಯುವಕರಿಗೆ ಉದ್ಯೋಗ ಕೊಡಿ ಎಂದು ತಿಳಿಸಿದರು.

5. **ಶ್ರೀ. ಲೋಕೇಶ್ ಬಿನ್ ಅಣ್ಣಪ್ಪ, ದುಮಗೆರೆ ಗ್ರಾಮ, ಹಾಸನ ತಾಲ್ಲೂಕು, ಹಾಸನ ಜಿಲ್ಲೆ:**

ಗಣಿಗಾರಿಕೆಯವರು ದುಮಗೆರೆ ಗ್ರಾಮಕ್ಕೆ ಸೌಲಭ್ಯ ಕೊಟ್ಟಿಲ್ಲ. ರಸ್ತೆ, ಶಾಲಾಭಿವೃದ್ಧಿ, ಜನರ ಜೀವನ ಶೈಲಿ ಏನೂ ಸುಧಾರಣೆಯಾಗಿಲ್ಲ. ಗಣಿಗಾರಿಕೆ ಸ್ಥಳದಿಂದ ಮನೆಗಳಿಗೆ ಅಂತರವಿರುವುದಿಲ್ಲ. ಗಣಿಗಾರಿಕೆ ಸ್ಥಳದಲ್ಲಿ ಆಳವಾದ ಗುಂಡಿ ಇರುವುದರಿಂದ ನೀರು ಸೋರಿಕೆಯಾಗಿ ಶೌಚಾಲಯದ ಗುಂಡಿಗಳು ಮುಚ್ಚಿಕೊಳ್ಳುತ್ತಿವೆ. ತ್ಯಾಜ್ಯ ವಸ್ತುಗಳನ್ನು ಸರಿಯಾಗಿ ವಿಲೇವಾರಿ ಮಾಡದೇ ಹಾಗೆಯೇ ದಾಸ್ತಾನು ಮಾಡಿರುವುದರಿಂದ ಸದರಿ ಪ್ರದೇಶವು ಗುಹೆಯಂತೆ

ಆಗಿರುತ್ತದೆ. ಪ್ರಾಣಿಗಳ ಓಡಾಟ ಇರುವುದರಿಂದ ರಾತ್ರಿ ವೇಳೆ ಅಭದ್ರತೆ ಕಾಡುತ್ತಿದೆ ಮತ್ತು ಎಲ್ಲಾ ಸೌಲಭ್ಯ ನೀಡಬೇಕೆಂದು ತಿಳಿಸಿದರು.

6. **ಶ್ರೀ.ಕುಮಾರ ಸ್ವಾಮಿ ಬಿನ್ ನಂಜೇಗೌಡ, ದುಮಗೆರೆ ಗ್ರಾಮ, ಹಾಸನ ತಾಲ್ಲೂಕು, ಹಾಸನ ಜಿಲ್ಲೆ:**
ನನ್ನ ಜಮೀನಿನ ಸರ್ವೆ ಸಂಖ್ಯೆ:5 ಆಗಿದ್ದು ಸದರಿ ಜಮೀನು ಗಣಿಗಾರಿಕೆ ಜಮೀನಿನ ಪಕ್ಕದಲ್ಲೇ ಇರುತ್ತದೆ. ತ್ಯಾಜ್ಯ ಮಣ್ಣು ಮತ್ತು ಕಲ್ಲುಗಳನ್ನು ಸರಿಯಾಗಿ ವಿಲೇವಾರಿ ಮಾಡಿಸಿಕೊಡಿ, ಗ್ರಾಮ ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ನಿಂದ ಗ್ರಾಮಕ್ಕೆ ಸೌಲಭ್ಯ ಕೊಡಿಸಿ ಎಂದು ತಿಳಿಸಿದರು.

7. **ಶ್ರೀ.ಮಂಜೇಗೌಡ ಬಿನ್ ಶಿವೇಗೌಡ, ದುಮಗೆರೆ ಗ್ರಾಮ, ಹಾಸನ ತಾಲ್ಲೂಕು, ಹಾಸನ ಜಿಲ್ಲೆ:**
ನನ್ನ ಜಮೀನು ಸರ್ವೆ ಸಂಖ್ಯೆ:9/1 ರಲ್ಲಿ ಇರುತ್ತದೆ ಮತ್ತು ಮನೆಯು ಸರ್ವೆ ಸಂಖ್ಯೆ6/7 ರಲ್ಲಿ ಇರುತ್ತದೆ. ಗಣಿಗಾರಿಕೆಯಿಂದ ಸದರಿಯವರ ಮನೆಯ ಅಡಿಪಾಯವು ತೇವದಿಂದ ಕೂಡಿರುತ್ತದೆ. ಗಣಿಗಾರಿಕೆಯಿಂದ ನನಗೆ ತೊಂದರೆಯಾಗಿರುವ ಬಗ್ಗೆ ಅರ್ಜಿಯನ್ನು ಎಂ.ಎಂ.ಎಲ್ ಅಧಿಕಾರಿಗಳಿಗೆ ಕೊಟ್ಟಿರುತ್ತೇನೆ. ಆದರೆ ಇದುವರೆವಿಗೂ ಉತ್ತರ ಕೊಟ್ಟಿರುವುದಿಲ್ಲ. ಆದುದರಿಂದ ಸ್ಥಳ ಪರಿಶೀಲನೆ ಮಾಡಿ ಪರಿಹಾರ ಕೊಡಿಸಿಕೊಡಬೇಕೆಂದು ಕೋರಿದರು.
**ಈಗಿನ ಯೋಜನೆಗೆ ಅನುಮತಿ ನೀಡಬಾರದೆಂದು ಸಭೆಗೆ ತಿಳಿಸಿದರು.**

8. **ಶ್ರೀ.ಧರಣೇಂದ್ರ ಬಿನ್ ರುದ್ರಲಿಂಗೇಗೌಡ, ಗ್ರಾಮ ಪಂಚಾಯತ್ ಸದಸ್ಯರು, ದುಮಗೆರೆ ಗ್ರಾಮ, ಹಾಸನ ತಾಲ್ಲೂಕು, ಹಾಸನ ಜಿಲ್ಲೆ:**
ಸದರಿ ಗಣಿಗಾರಿಕೆಯಿಂದ ಬರುವ ತ್ಯಾಜ್ಯವನ್ನು ಸರಿಯಾಗಿ ವಿಲೇವಾರಿ ಮಾಡದ ಕಾರಣ ಚಿರತೆ ಕಾಟ ಹೆಚ್ಚಾಗಿದ್ದು ದುಮಗೆರೆ ಗ್ರಾಮಸ್ಥರಿಗೆ ತೊಂದರೆಯಾಗಿದೆ. ಗಣಿಗಾರಿಕಾ ಪ್ರದೇಶದಲ್ಲಿ ತಡೆಗೋಡೆಯನ್ನು ಸಹ ನಿರ್ಮಿಸಿರುವುದಿಲ್ಲ. ಗಣಿಗಾರಿಕೆಯಿಮದ ಶಬ್ದ ಮಾಲಿನ್ಯ, ವಾಯು ಮಾಲಿನ್ಯ ಹೆಚ್ಚಾಗಿದ್ದು ಕುಡಿಯುವ ನೀರು ಸಹ ಕಲುಷಿತವಾಗಿರುತ್ತದೆ. ಆದ್ದರಿಂದ, ದುಮಗೆರೆ ಗ್ರಾಮಸ್ಥರಿಗೆ ಪರಿಹಾರ ನೀಡುವಂತೆ, ಒಳಚರಂಡಿ, ರಸ್ತೆ, ನೀರು ಹಾಗು ದೇವಸ್ಥಾನವನ್ನು ನೀಡಬೇಕೆಂದು ತಿಳಿಸಿದರು.

9. **ಶ್ರೀ.ಕುಮಾರ್ ಬಿನ್ ಲಕ್ಷ್ಮೀಗೌಡ, ದುಮಗೆರೆ ಗ್ರಾಮ, ಹಾಸನ ತಾಲ್ಲೂಕು, ಹಾಸನ ಜಿಲ್ಲೆ:**
ದುಮಗೆರ ಗ್ರಾಮಕ್ಕೆ ಚಿರತೆಯಿಂದ ಆಡು, ಕುರಿ ಮರಿಗಳನ್ನು ಕಳೆದುಕೊಂಡವರಿಗೆ ಪರಿಹಾರ ಕೊಡಿ, ಸಾರ್ವಜನಿಕರು ರಾತ್ರಿ ಹೊತ್ತು ಓಡಾಡುವ ಹಾಗಿಲ್ಲ, ಹತ್ತಿರದ ಕೆರೆಯನ್ನು ಯೋಜನಾ ವರದಿಯಲ್ಲಿ ನಮೂದಿಸಿರುವುದಿಲ್ಲ ಮತ್ತು ಯೋಜನಾ ವರದಿಯಲ್ಲಿ ನ್ಯೂನತೆಗಳಿವೆ/ಯೋಜನಾ ವರದಿಯ ಮಾಹಿತಿಗಳು ತಪ್ಪಾಗಿದ್ದು ಇವುಗಳನ್ನು ಸರಿಪಡಿಸಬೇಕೆಂದು ತಿಳಿಸಿದರು.

**ಈಗಿನ ಯೋಜನೆಗೆ ಅನುಮತಿ ನೀಡಬಾರದೆಂದು ಸಭೆಗೆ ತಿಳಿಸಿದರು.**

10. **ಶ್ರೀಮತಿ.ರೇಣುಕಾ ಕೋಂ ಗಂಗೇಗೌಡ, ದುಮಗೆರೆ ಗ್ರಾಮ, ಹಾಸನ ತಾಲ್ಲೂಕು, ಹಾಸನ ಜಿಲ್ಲೆ:**
ನಮ್ಮ ಗ್ರಾಮದ ಶಾಲೆಗೆ ಕಂಪ್ಯೂಟರ್ ನೀಡಬೇಕೆಂದು, ಗ್ರಾಮಕ್ಕೆ ಆಸ್ಪತ್ರೆ ಬೇಕು, ಮಹಿಳೆಯರಿಗೆ ಹೊಲಿಗೆ ಯಂತ್ರಗಳನ್ನು ಕೊಡಿಸಿಕೊಡಬೇಕೆಂದು ಮತ್ತು ಜಮೀನುಗಳಲ್ಲಿ ಬೆಳೆಯನ್ನು ಬೆಳೆಯುವುದಕ್ಕಾಗುತ್ತಿಲ್ಲವೆಂದು ತಿಳಿಸಿದರು.

11. **ಶ್ರೀ.ರಾಮಕೃಷ್ಣೇಗೌಡ ಬಿನ್ ಗಂಡಸೀಗೌಡ, ದುಮಗೆರೆ ಗ್ರಾಮ, ಹಾಸನ ತಾಲ್ಲೂಕು, ಹಾಸನ ಜಿಲ್ಲೆ:**
ಗ್ರಾಮದಲ್ಲಿನ ರಸ್ತೆಯು 20 ಟನ್ ತೂಕದ ಲಾರಿಗಳು ಓಡಾಡಬಹುದಾಗಿದೆ. ಆದರೆ, ಗಣಿಗಾರಿಕೆಯ ಲಾರಿಗಳು 40 ಟನ್ ಗಿಂತಲೂ ಹೆಚ್ಚಿನ ತೂಕವನ್ನು ಹಾಕಿಕೊಂಡು ಸಾಗುತ್ತವೆ. ಇದರಿಂದ ಗ್ರಾಮದಲ್ಲಿನ ರಸ್ತೆಗಳೆಲ್ಲವೂ ಹಾಳಾಗಿವೆ ಎಂದು ತಿಳಿಸಿದರು. ಹಾಗು ಈಗಿನ ಯೋಜನಾ ವರದಿಯು ತಪ್ಪಾಗಿದ್ದು ಯೋಜನೆಗೆ ಅನುಮತಿ ನೀಡಬಾರದೆಂದು ತಿಳಿಸಿದರು.

ಈ ಸಭೆಯಲ್ಲಿ ನೆರೆದಿದ್ದವರು ಲಿಖಿತ ಮನವಿಯನ್ನು ಅಧ್ಯಕ್ಷರಿಗೆ ಸಲ್ಲಿಸಿದರು. ಲಿಖಿತವಾಗಿ ಸಲ್ಲಿಸಿದವರ ಮನವಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ.

ಸಭೆಯಲ್ಲಿ ಹಾಜರಿದ್ದ ಶ್ರೀಮತಿ. ಕವಿತಾ ರಾಜಾರಾಂ, ಅಪರ ಜಿಲ್ಲಾಧಿಕಾರಿಗಳು ಇವರು ಸಭೆಯನ್ನು ಉದ್ದೇಶಿಸಿ ಮಾತನಾಡಿ ಸಭೆಯಲ್ಲಿದ್ದ ಸಾರ್ವಜನಿಕರಿಗೆ ಸದರಿ ಗಣಿಗಾರಿಕೆಗೆ ಸಂಬಂಧಿಸಿದ ದೂರುಗಳನ್ನು ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಬೆಂಗಳೂರು, ಕರ್ನಾಟಕ ಇವರಿಗೆ ಕಳುಹಿಸಿಕೊಡಲಾಗುವುದು ಎಂದು ತಿಳಿಸಿದರು. ಸಾರ್ವಜನಿಕರ ಕೋರಿಕೆಯಂತೆ ಗಣಿಗಾರಿಕೆ ಪ್ರದೇಶದ ಹತ್ತಿರದ ಬೋರ್‌ವೆಲ್‌ಗಳು ಹಾಗು ದುಮಗೆರೆ ಕೆರೆಯ ನೀರನ್ನು ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸಂಗ್ರಹಿಸಿ/ವಿಶ್ಲೇಷಿಸಿ ನೀರಿನ ಗುಣಮಟ್ಟವನ್ನು ಪರೀಕ್ಷಿಸಲಾಗುವುದು ಎಂದು ತಿಳಿಸಿದರು. ಮುಂದುವರೆದು, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ಗಣಿಗಾರಿಕೆಯು ಗ್ರಾಮದಿಂದ ಎಷ್ಟು ಅಂತರದಲ್ಲಿ ಇರಬೇಕೆಂದು ಹಾಗು ಇಲಾಖಾ ನಿಯಮಗಳ ಕುರಿತು ಪರಿವೀಕ್ಷಿಸಲು ತಿಳಿಸಲಾಗುವುದು ಹಾಗು ಆ ವರದಿಯನ್ನೂ ಸಹ ಸರ್ಕಾರಕ್ಕೆ ಕಳುಹಿಸಿ ಕೊಡಲಾಗುವುದೆಂದು ತಿಳಿಸಿದರು.

ಡಾ// ಬಿ.ಎಂ.ಪ್ರಕಾಶ್, ಹಿರಿಯ ಪರಿಸರ ಅಧಿಕಾರಿ, ವಲಯ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಮೈಸೂರು ಇವರು ಮಾತನಾಡಿ ಸಭೆಯಲ್ಲಿ ಕೆರೆ, ರಸ್ತೆ ಇತ್ಯಾದಿಗಳನ್ನು ವರದಿಯಲ್ಲಿ ಸೇರಿಸಿಲ್ಲ, ಗಣಿಗಾರಿಕೆಯಿಂದ ಮನೆಗಳು ಎಷ್ಟು ದೂರದಲ್ಲಿ ಇರಬೇಕು, ಬಫರ್ ಎಷ್ಟಿರಬೇಕು, ಉದ್ಯೋಗ, ಮತ್ತು ಸಿ.ಎಸ್.ಆರ್ ಹಣವನ್ನು ದುಮಗೆರೆ ಗ್ರಾಮಕ್ಕೇ ಮೀಸಲಿಡಬೇಕು ಎಂದು ತಿಳಿಸಿರುತ್ತಾರೆಂದು ತಿಳಿಸಿ ಅವುಗಳನ್ನು ವರದಿಯಲ್ಲಿ ಸೇರ್ಪಡೆಗೊಳಿಸಿದ ನಂತರ ವರದಿಯನ್ನು ಸಲ್ಲಿಸಬೇಕೆಂದು ಯೋಜನಾದಾರರಿಗೆ ತಿಳಿಸಿದರು.

ಕೊನೆಯದಾಗಿ, ದುಮಗೆರೆ ಗ್ರಾಮಸ್ಥರು ಯೋಜನೆದಾರರು ಸಿ.ಎಸ್.ಆರ್. ಹಣವನ್ನು ದುಮಗೆರೆ ಗ್ರಾಮಕ್ಕೆ ಮಾತ್ರ ನೀಡಬೇಕೆಂದು ಹಾಗು ದುಮಗೆರೆ ಗ್ರಾಮದ ವಿದ್ಯಾವಂತರಿಗೆ ವಿದ್ಯಾರ್ಹತೆಯ ಮೇರೆಗೆ ಉದ್ಯೋಗವನ್ನು ನೀಡಬೇಕೆಂದು ಅಭಿಪ್ರಾಯಿಸಿದರು.

ಸಭೆಯ ಅಧ್ಯಕ್ಷರು, ಸಾರ್ವಜನಿಕರು ಮೌಖಿಕವಾಗಿ ತಿಳಿಸಿದ ಹಾಗು ಲಿಖಿತವಾಗಿ ಸಲ್ಲಿಸಿದ ಕಳಕಳಿ/ಸಲಹೆ/ಅನಿಸಿಕೆ/ಅಭಿಪ್ರಾಯ/ಸೂಚನೆಗಳನ್ನು ನಡವಳಿಯಲ್ಲಿ ದಾಖಲಿಸಿ ಛಾಯಾಚಿತ್ರ ಹಾಗು ವಿಡಿಯೋ

ದಾಖಲಾತಿಗಳೊಂದಿಗೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಮೂಲಕ ರಾಜ್ಯ ಪರಿಸರ ಆಘಾತ ನಿರ್ಧರಣಾ ಪ್ರಾಧಿಕಾರದ ಅಡಿಯಲ್ಲಿ ಬರುವ ರಾಜ್ಯ ಪರಿಸರ ಮೌಲ್ಯ ನಿರ್ಣಯ ಸಮಿತಿ (State Level Expert Appraisal Committee) ಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಿಕೊಡಲಾಗುವುದೆಂದು ತಿಳಿಸಿದರು.

ಶ್ರೀ. ಪರಮೇಶ್, ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಮಿನರಲ್ಸ್ ಕಾರ್ಪೋರೇಶನ್ ಲಿಮಿಟೆಡ್ ರವರು ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ವಂದಿಸಿ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಅಂತಿಮವಾಗಿ ಮುಕ್ತಾಯಗೊಳಿಸಲಾಯಿತು.

**(ಶ್ರೀಮತಿ ಕವಿತ ರಾಜಾರಾಂ)**
**ಅಪರ ಜಿಲ್ಲಾಧಿಕಾರಿಗಳು**
**ಹಾಸನ ಜಿಲ್ಲೆ, ಹಾಸನ**

# ಅನುಬಂಧ

(ದ್ವಿಪ್ರತಿಗಳು)

1. ಪರಿಸರ ಸಾರ್ವಜನಿಕ ಆಲಿಕೆ ಸಭೆಗೆ ಭಾಗವಹಿಸಿದ ಅಧಿಕಾರಿಗಳ/ಯೋಜನಾದಾರರ/ಸಾರ್ವಜನಿಕರುಗಳ ವಿಳಾಸ ಮತ್ತು ಸಹಿ ಇರುವ ಹಾಜರಾತಿ ವಹಿಯ ಪ್ರತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಲಾಗಿದೆ.
2. ಸಾರ್ವಜನಿಕರ ಲಿಖಿತ ಹೇಳಿಕೆ/ಆಕ್ಷೇಪಣೆಗಳನ್ನು ಅನುಬಂಧ-2 ರಲ್ಲಿ ಲಗತ್ತಿಸಲಾಗಿದೆ.
3. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪ್ರಕ್ರಿಯೆಯ ಛಾಯಾಚಿತ್ರವಿರುವ ಪ್ರತಿಯನ್ನು ಅನುಬಂಧ-3 ರಲ್ಲಿ ಲಗತ್ತಿಸಲಾಗಿದೆ.
4. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಪ್ರಚಾರಕ್ಕಾಗಿ ದಿ:10.08.2022 ರಂದು ಕರಪತ್ರಗಳನ್ನು ವಿತರಿಸಲಾದ ಪ್ರತಿಗಳನ್ನು ಅನುಬಂಧ-4 ರಲ್ಲಿ ಲಗತ್ತಿಸಲಾಗಿದೆ.
5. ಪರಿಸರ ಸಾರ್ವಜನಿಕ ಆಲಿಕೆ ಸಭೆಯ ಆಡಿಯೋ ಮತ್ತು ವಿಡಿಯೋ ಇರುವ ಪೆನ್ ಡ್ರೈವ್‌ಗಳನ್ನು ಅನುಬಂಧ-5 ರಲ್ಲಿ ಲಗತ್ತಿಸಲಾಗಿದೆ.

(ಶ್ರೀಮತಿ ಕವಿತ ರಾಜಾರಾಂ)
ಅಪರ ಜಿಲ್ಲಾಧಿಕಾರಿಗಳು
ಹಾಸನ ಜಿಲ್ಲೆ, ಹಾಸನ